# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುವ ಹಿಂದುಳಿದ ವರ್ಗಗಳ ಜನರು ಕುರಿ/ಮೇಕೆ ಸಾಕಾಣಿಕೆಯನ್ನು ಮುಖ್ಯ ಕಸುಬನ್ನಾಗಿಸಿಕೊಂಡಿರುವ ಆರ್ಥಿಕ ಮಟ್ಟವನ್ನು ಸುಧಾರಿಸಲು ಕುರಿ/ಮೇಕೆ ಸಾಕಾಣಿಕೆಗೆ ಘಟಕ ವೆಚ್ಚ 1.00 ಲಕ್ಷ ರೂ.ಗಳಂತೆ ಸಾಲ ಮತ್ತು ಸಹಾಯಧನ ನೀಡುವ ಕುರಿತು.

ಓದಲಾಗಿದೆ : 1) 2014-15ನೇ ಸಾಲಿನ ಆಯವ್ಯಯದ ಭಾಷಣ

2) ಸರ್ಕಾರದ ಆದೇಶ ಸಂಖ್ಯೆ: ಹಿಂವಕ 858 ಬಿಎಂಎಸ್ 2014, ದಿನಾಂಕ: 11/03/2015.

3) ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ(ನಿ), ಬೆಂಗಳೂರು ಇವರ ಏಕ ಕಡತ ಸಂಖ್ಯೆ: ಸ/ಕುಸಾ/ಸಿಆರ್-06ಬಿ/2014-15, ದಿನಾಂಕ: 04.03.2015

* * *

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಂತೆ 2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಕಂಡಿಕೆ-202, ಉಪ ಕಂಡಿಕೆ-3ರಲ್ಲಿ ಹಿಂದುಳಿದ ವರ್ಗಗಳ ಜನರು ಕುರಿ/ಮೇಕೆ ಸಾಕಾಣಿಕೆಯನ್ನು ಮುಖ್ಯ ಕಸುಬನ್ನಾಗಿಸಿಕೊಂಡಿರುವ ಆರ್ಥಿಕ ಮಟ್ಟವನ್ನು ಸುಧಾರಿಸಲು ಕುರಿ/ಮೇಕೆ ಸಾಕಾಣಿಕೆಗೆ ಘಟಕ ವೆಚ್ಚ 1.00 ಲಕ್ಷ ರೂ.ಗಳಂತೆ ಸಾಲ ಮತ್ತು ಸಹಾಯಧನದ ಸೌಲಭ್ಯ ನೀಡಲಾಗುವುದೆಂದು ಘೋಷಣೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಸರ್ಕಾರದ ಆದೇಶದಲ್ಲಿ ಕುರಿ/ಮೇಕೆ ಸಾಕಾಣಿಕೆಯನ್ನು ಮುಖ್ಯ ಕಸುಬನ್ನಾಗಿಸಿಕೊಂಡಿರುವ ಹಿಂದುಳಿದ ವರ್ಗಗಳ ಜನರ ಆರ್ಥಿಕ ಮಟ್ಟವನ್ನು ಸುಧಾರಿಸಲು ಸಾಲ ಮತ್ತು ಸಹಾಯಧನ ಮಂಜೂರಾತಿಗೆ ಸಹಾಯಧನದ ಲೆಕ್ಕ ಶೀರ್ಷಿಕೆ-2225-03-190-0-04ರಲ್ಲಿ ಒಟ್ಟಾರೆ ಮೊತ್ತ **ರೂ.1450.00ಲಕ್ಷಗಳನ್ನು** ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರಂತೆ ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರು, ಹಿಂದುಳಿದ ವರ್ಗಗಳ ಜನರು ಕುರಿ/ಮೇಕೆ ಸಾಕಾಣಿಕೆಯನ್ನು ಮುಖ್ಯ ಕಸುಬನ್ನಾಗಿಸಿಕೊಂಡಿರುವ ಆರ್ಥಿಕ ಮಟ್ಟವನ್ನು ಸುಧಾರಿಸಲು ಕುರಿ/ಮೇಕೆ ಸಾಕಾಣಿಕೆಗೆ ಘಟಕ ವೆಚ್ಚ 1.00 ಲಕ್ಷ ರೂ.ಗಳಂತೆ ಸಾಲ ಮತ್ತು ಸಹಾಯಧನ ಮಂಜೂರು ಮಾಡಲು ಪ್ರಸ್ತಾಪಿಸಿದ ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಡಂತೆ ಆದೇಶಿಸಲಾಗಿದೆ..

**ಆದೇಶ ಸಂಖ್ಯೆ: ಹಿಂವಕ 458 ಬಿಎಂಎಸ್ 2015, ಬೆಂಗಳೂರು ದಿನಾಂಕ:07.09.2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಕುರಿ/ಮೇಕೆ ಸಾಕಾಣಿಕೆಯನ್ನು ಮುಖ್ಯ ಕಸುಬನ್ನಾಗಿಸಿಕೊಂಡಿರುವ ಹಿಂದುಳಿದ ವರ್ಗಗಳ ಜನರ ಆರ್ಥಿಕ ಮಟ್ಟವನ್ನು ಸುಧಾರಿಸಲು ಕುರಿ/ಮೇಕೆ ಸಾಕಾಣಿಕೆಗೆ ಘಟಕ ವೆಚ್ಚ 1.00 ಲಕ್ಷ ರೂ.ಗಳಂತೆ ಸಾಲ ಮತ್ತು ಸಹಾಯಧನದ ಸೌಲಭ್ಯ ನೀಡುವ ಯೋಜನೆ ಅನುಷ್ಠಾನಕ್ಕೆ ಅನುಬಂಧದಲ್ಲಿ ಲಗತ್ತಿಸಿದ ಮಾರ್ಗಸೂಚಿಗಳಿಗೆ ನಿಗಮಕ್ಕೆ ಒದಗಿಸಿರುವ ಅನುದಾನದ ಮಿತಿಯಲ್ಲಿಯೇ ಕಾರ್ಯಕ್ರಮ ಜಾರಿಗೊಳಿಸುವ ಹಾಗೂ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತರವರ ಮಾದರಿಯಲ್ಲಿಯೇ ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಷರತ್ತಿಗೊಳಪಟ್ಟು ಅನುಮೋದನೆ ನೀಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 488 ವೆಚ್ಚ-3/2015, ದಿ.01.07.2015 ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 81 ಐಎಂಎಂ 2015 ದಿ.30.07.2015ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರು
ಮತ್ತು ಅವರ ಹೆಸರಿನಲ್ಲಿ.

(ಆರ್.ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಗೆ:

1. ಮಹಾಲೇಖಪಾಲರು, (ಎ ಮತ್ತು ಇ, ಲೆಕ್ಕ ಪರಿಶೋಧನೆ-1 ಮತ್ತು 2) ಕರ್ನಾಟಕ ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ), ವಿಧಾನ ಸೌಧ.
6. ರಾಜ್ಯ ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಉಪ ನಿರ್ದೇಶಕರು, ಖಜಾನೆ ನೆಟ್‌ವರ್ಕ್, ಮ್ಯಾನೆಜ್‌ಮೆಂಟ್ ಕೇಂದ್ರ, 2ನೇ ಮಹಡಿ, ಸೌತ್ ಬ್ಲಾಕ್, ಖನಿಜ ಭವನ, ದೇವರಾಜ ಅರಸು ರಸ್ತೆ, ಬೆಂಗಳೂರು.
8. ಆಂತರಿಕ ಆರ್ಥಿಕ ಸಲಹೆಗಾರರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸಸೌಧ.
9. ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ.
11. ಸರ್ಕಾರದ ಉಪ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು, ವಿಕಾಸಸೌಧ.
12. ಸರ್ಕಾರದ ಅಧೀನ ಕಾರ್ಯದರ್ಶಿ-1 ಮತ್ತು 2, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸಸೌಧ.
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

-----

## ಸರ್ಕಾರದ ಆದೇಶ ಸಂಖ್ಯೆ: ಹಿಂವಕ 458 ಬಿಎಂಎಸ್ 2015, ಬೆಂಗಳೂರು, ದಿನಾಂಕ:07.09.2015 ಕ್ಕೆ ಅನುಬಂಧ

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದಕುರಿ/ಮೇಕೆ ಸಾಕಾಣಿಕೆಯನ್ನು ಮುಖ್ಯ ಕಸುಬನ್ನಾಗಿಸಿಕೊಂಡಿರುವ ಹಿಂದುಳಿದ ವರ್ಗಗಳ ಜನರ ಆರ್ಥಿಕ ಮಟ್ಟ ಸುಧಾರಿಸಲು ಕುರಿ/ಮೇಕೆ ಸಾಕಾಣಿಕೆಗೆ ಸಾಲ/ಸಹಾಯಧನದ ಸೌಲಭ್ಯ ಒದಗಿಸಲು ರೂಪಿಸಲಾದ ಕಾರ್ಯಕ್ರಮದ ನಿಯಮ ಮತ್ತು ಮಾರ್ಗಸೂಚಿಗಳು.

1. <u>ಯೋಜನೆ ಉದ್ದೇಶ:-</u> ಕುರಿ/ಮೇಕೆ ಸಾಕಾಣಿಕೆ ಮಾಡುವ ಹಿಂದುಳಿದ ವರ್ಗಗಳದ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದ ಜನರಿಗೆ ಕುರಿ/ಮೇಕೆಗಳನ್ನು (23 ಕುರಿ/ಮೇಕೆ ಮತ್ತು 2 ಟಗರು) ಸಾಕಲು ಆರ್ಥಿಕ ನೆರವು ನೀಡುವುದು.

2. <u>ಈ ಯೋಜನೆಯಲ್ಲಿ ಪ್ರಯೋಜನ ಪಡೆಯಲು ಇರಬೇಕಾದ ಅರ್ಹತೆಗಳು:-</u>

ಅ. ಈ ಯೋಜನೆಯಲ್ಲಿ ಆರ್ಥಿಕ ಸಹಾಯ ಪಡೆಯಲು ಅಭ್ಯರ್ಥಿಯು ದಿನಾಂಕ 30/03/2002ರ ಆದೇಶ ಸಂಖ್ಯೆ/ಎಸ್‌ಡಬ್ಲ್ಯೂಡಿ/228/ಬಿಸಿಎ/2000 ಆದೇಶದಲ್ಲಿ ಗುರ್ತಿಸಿದ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದ ಸೇರಿದವರಾಗಿರಬೇಕು(ವಿಶ್ವಕರ್ಮ ಮತ್ತು ಅದರ ಉಪ ಸಮುದಾಯಗಳನ್ನು ಹೊರತು ಪಡಿಸಿ)

ಆ. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದವರ್‍ಾದರೆ ರೂ.40,000/-ಗಳ ಹಾಗೂ ನಗರ ಪ್ರದೇಶದವರಿಗೆ ರೂ.55,000/-ಗಳನ್ನು ಮೀರಿರಬಾರದು.

ಇ. ಒಂದು ಕುಟುಂಬದ ಒಬ್ಬ ಸದಸ್ಯರಿಗೆ ಒಂದುಬಾರಿ ಮಾತ್ರ ಸೌಲಭ್ಯ ಒದಗಿಲಾಗುವುದು.

ಈ. ಕರ್ನಾಟಕ ರಾಜ್ಯದಲ್ಲಿ ಕನಿಷ್ಠ 10 ವರ್ಷ ವಾಸವಾಗಿರಬೇಕು.

ಉ. ಅರ್ಜಿದಾರರು ಕುರಿ ಸಾಕುವುದನ್ನು ಮುಖ್ಯ ಕಸುಬಾಗಿ ನಿರ್ವಹಿಸುತ್ತಿರುಬೇಕು.

ಊ. ಅರ್ಜಿದಾರರು ಕುರಿ/ಮೇಕೆ ಸಾಕಾಣಿಕೆಗೆ ಸ್ಥಳಾವಕಾಶವನ್ನು ಹೊಂದಿರಬೇಕು.

ಋ. ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಹಾಗೂ ಗರಿಷ್ಠ 55 ವರ್ಷಗಳ ಮಿತಿಯೊಳಗಿರಬೇಕು.

ಎ. ಸರ್ಕಾರದ/ನಿಗಮದ ಬೇರೆ ಯಾವುದಾದರೂ ಯೋಜನೆಗಳಲ್ಲಿ ಸಾಲ ಅಥವಾ ಇತರೆ ಆರ್ಥಿಕ ಸವಲತ್ತು ಪಡೆದಿರಬಾರದು.

ಏ. ಮಹಿಳೆಯರಿಗೆ ಈ ಯೋಜನೆಯಲ್ಲಿ ಶೇ.33ರಷ್ಟು ಮೀಸಲು ನಿಗದಿಪಡಿಸಿದೆ.

ಐ. ಅಂಗವಿಕಲರಿಗೆ ಈ ಯೋಜನೆಯಲ್ಲಿ ಶೇ.3ರಷ್ಟು ಮೀಸಲು ನಿಗದಿಪಡಿಸಿದೆ.

ಒ. ಅರ್ಜಿದಾರರು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆ ಹೊಂದಿರಬೇಕು.

ಓ. ಅರ್ಜಿದಾರರು ಹಾಗೂ ಅವರ ಕುಟುಂಬದವರು ನಿಗಮದ ಯಾವುದೇ ಯೋಜನೆಗಳಲ್ಲಿ ಸಾಲ ಅಥವಾ ಇತರೆ ಆರ್ಥಿಕ ಸವಲತ್ತು ಪಡೆದಿರಬಾರದು.

ಔ. ನಿಗಮದ ನಿರ್ದೇಶಕ ಮಂಡಳಿಯು ಕಾಲಕಾಲಕ್ಕೆ ವಿಧಿಸುವ ಇನ್ನಿತರ ಅರ್ಹತೆಗಳನ್ನು ಹೊಂದಿದವರಾಗಿರಬೇಕು.

3. <u>ಘಟಕ ವೆಚ್ಚ, ಸಾಲದ ಮೊತ್ತ ಮತ್ತು ಸಹಾಯಧನ:-</u> ಕುರಿ/ಮೇಕೆಗಳನ್ನು ಸಾಕಾಲು ಗರಿಷ್ಠ ಘಟಕ ರೂ.1,00,000/-ಗಳು. ಇದರಲ್ಲಿ ಶೇ.30ರಷ್ಟು ಗರಿಷ್ಠ ರೂ.10,000/- ಸಹಾಯಧನ

ಹಾಗೂ ಉಳಿಕೆ ಶೇ.70ರಷ್ಟು ಗರಿಷ್ಠ ರೂ.90,000/-ಗಳ ಶೇ.4ರ ಬಡ್ಡಿದರದಲ್ಲಿ ಸಾಲವನ್ನು ಮಂಜೂರು ಮಾಡುವುದು. ಘಟಕ ವೆಚ್ಚದಲ್ಲಿ 23 ಕುರಿ/ಮೇಕೆ ಮತ್ತು 2 ಟಗರು ಕೊಂಡು ಕೊಳ್ಳಬೇಕು.

4. <u>ಫಲಾನುಭವಿಗಳ ಆಯ್ಕೆ ಮತ್ತು ಯೋಜನೆಗಳ ಅನುಷ್ಠಾನ:-</u> ಸರ್ಕಾರದ ಆದೇಶ ಸಂಖ್ಯೆ/ಸಕಇ/221/ಬಿಸಿಎ/2008, ದಿನಾಂಕ:02/01/2009ರ ಆದೇಶದಲ್ಲಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಸಾಲದ ಯೋಜನೆಗಳ ಮತ್ತು ಗಂಗಾಕಲ್ಯಾಣ ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಮಾನ್ಯ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿನ ರಚಿಸಿರುವ ಆಯ್ಕೆ ಸಮಿತಿ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

5. <u>ಆಯ್ಕೆ ಸಮಿತಿಯ ಕರ್ತವ್ಯಗಳು:-</u>

1) ಆಯ್ಕೆ ಸಮಿತಿಯು ಈ ಯೋಜನೆಯಲ್ಲಿ ನಿಗದಿಪಡಿಸಿದ ಗುರಿಯನ್ವಯ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಚಾರ ನೀಡಿ ಅರ್ಜಿಗಳನ್ನು ಆಹ್ವಾನಿಸಿ, ನಿಗದಿತ ಅವಧಿಯೊಳಗೆ ಅರ್ಜಿಗಳನ್ನು ಸ್ವೀಕರಿಸುವುದು.

2) ಗ್ರಾಮೀಣ ಪ್ರದೇಶಗಳಲ್ಲಿ ಕುರಿ/ಮೇಕೆ ಸಾಕಾಣಿಕೆಯನ್ನು ವೃತ್ತಿ ನಿರ್ವಹಿಸುವ ಜನರ ಆರ್ಥಿಕ ಸಮಂಜಸತೆ ಮತ್ತು ಲಾಭದಾಯಕತೆ ಮತ್ತು ಅರ್ಜಿದಾರರ ಇಚ್ಛಾಶಕ್ತಿ, ಅಭಿಲಾಷೆ, ಅಪೇಕ್ಷೆ, ಕುರಿ/ಮೇಕೆ ಸಾಕಾಣಿಕೆಯನ್ನು ನಿರ್ವಹಿಸುತ್ತಿರುವ ಬಗ್ಗೆ ಪರಿಶೀಲಿಸಿ ಸಾಲವನ್ನು ಸದುಪಯೋಗ ಪಡಿಸಿಕೊಳ್ಳುವಂತಹ, ಸಾಲ ಮರುಪಾವತಿ ಮಾಡುವ ಇಚ್ಛಾಶಕ್ತಿಯುಳ್ಳ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು.

3) ಜಿಲ್ಲಾ ವ್ಯವಸ್ಥಾಪಕರು ಪಡೆದ ಅರ್ಜಿಗಳನ್ನು ನಿಯಮಗಳನ್ವಯ ಪರಿಶೀಲಿಸಿ ಅಗತ್ಯ ಎಲ್ಲಾ ದಾಖಲಾತಿಗಳನ್ನು ಒದಗಿಸಿರುವ ಬಗ್ಗೆ ದೃಢೀಕರಿಸಿಕೊಂಡು ಅಂತಹ ಅರ್ಜಿಗಳನ್ನು ಆಯ್ಕೆ ಸಮಿತಿ ಮುಂದೆ ಪಟ್ಟಿ ಮಾಡಿ ಮಂಡಿಸಬೇಕು.

4) ಆಯ್ಕೆ ಸಮಿತಿಯು ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಸಾಲ ಮಂಜೂರು ಮಾಡುವುದು ಹಾಗೂ ಪ್ರಸ್ತಾವನೆಯನ್ನು ಅನುಮೋದಿಸಿ ಸಾಲ ಮಂಜೂರಾತಿ ನೀಡಿದ ಫಲಾನುಭವಿಗಳಿಗೆ ಸಾಲದ ಮೊತ್ತವನ್ನು ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ನಿಗಮದ ಸಂಬಂಧಪಟ್ಟ ವಿಭಾಗೀಯ ಕಛೇರಿಗೆ ಕಳುಹಿಸಬೇಕು. ಪ್ರಸ್ಥಾವನೆಯ ಇನ್ನೊಂದು ಪ್ರತಿಯನ್ನು ನಿಗಮದ ಕೇಂದ್ರ ಕಛೇರಿಗೆ ಕಳುಹಿಸಬೇಕು.

5) ಫಲಾನುಭವಿಯ ಹೆಸರು ಮತ್ತು ಪೂರ್ಣ ವಿಳಾಸ, ಜಾತಿ/ಆದಾಯ, ಜಾಮೀನುದಾರರ ಹೆಸರು ಮತ್ತು ಪೂರ್ಣ ವಿಳಾಸ, ಸಾಲದ ಭದ್ರತೆಗೆ ಅರ್ಜಿದಾರರು/ಜಾಮೀನುದಾರರು ನೀಡುವ ಸ್ಥಿರಾಸ್ತಿಯ (ಸರ್ವೆ ನಂ, ಜಮೀನಿನ ವಿಸ್ತೀರ್ಣ, ಅಂದಾಜು ಮೌಲ್ಯ ಇತ್ಯಾದಿ) ವಿವರ, ಸಾಲದ ಮೊತ್ತ, ಸಹಾಯಧನ, ಮಂಜೂರು ಮಾಡಿದ ಒಟ್ಟು ಮೊತ್ತ ಹಾಗೂ ಸಾಲದ ಉದ್ದೇಶ ಈ ಎಲ್ಲಾ ಅಂಶಗಳನ್ನು ಮಂಜೂರಾತಿ ಪ್ರಸ್ತಾವನೆಯಲ್ಲಿ ನಮೂದಿಸುವುದು.

6. <u>ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:-</u> ಹಿಂದುಳಿದ ವರ್ಗಗಳಿಗೆ ಸೇರಿದ ಅರ್ಜಿದಾರರು ಚೈತನ್ಯ ಸ್ವಯಂ ಉದ್ಯೋಗ ನೇರ ಸಾಲ ಯೋಜನೆಗೆ ನಿಗಧಿಪಡಿಸಿದ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿ ಅಗತ್ಯ ಈ ಕೆಳಕಂಡ ದಾಖಲಾತಿಗಳೊಂದಿಗೆ ಸಲ್ಲಿಸಬೇಕು.

1. ಅರ್ಜಿದಾರರು ಹಿಂದುಳಿದ ವರ್ಗಗಳಿಗೆ ಸೇರಿರುವುದಕ್ಕೆ ಸಂಬಂಧಿಸಿದ ತಾಲ್ಲೂಕು ತಹಶಿಲ್ದಾರ್ ರಿಂದ ನಿಗದಿತ ನಮೂನೆಯಲ್ಲಿ ಪಡೆದ ಜಾತಿ/ಕುಟುಂಬದ ವಾರ್ಷಿಕ ಆದಾಯ ಪ್ರಮಾಣ ಪತ್ರ.

2. ಅರ್ಜಿದಾರರು ಕುರಿ/ಮೇಕೆ ಸಾಕುವುದರಲ್ಲಿ ಮುಖ್ಯ ಕಸುಬಾಗಿ ನಿರ್ವಹಿಸುತ್ತಿರುವ ಬಗ್ಗೆ ಕನಿಷ್ಠ 5 ವರ್ಷಗಳ ಅನುಭವ ಹೊಂದಿರುವ ಬಗ್ಗೆ ಸ್ವಯಂ ಧೃಡೀಕರಣ ನೀಡಬೇಕು.

3. ಕುರಿ/ಮೇಕೆ ಸಾಕಲು ಮಾಡಲು ಸ್ಥಳಾವಕಾಶ ಹೊಂದಿರುವ ಬಗ್ಗೆ ಸ್ವಯಂ ಧೃಡೀಕರಣ ನೀಡಬೇಕು.

4. ಅರ್ಜಿದಾರರ ವಾಸದ ಪುರಾವೆಗಾಗಿ ಪಡಿತರ ಚೀಟಿ/ಚುನಾವಣಾ ಗುರುತಿನ ಚೀಟಿ/ಆಧಾರ ಕಾರ್ಡ್‌ನ ಧೃಡೀಕೃತ ಪ್ರತಿ ಒದಗಿಸಬೇಕು.

5. ಅರ್ಜಿದಾರರ ಪಾಸ್ ಪೋರ್ಟ್ ಅಳತೆಯ ಇತ್ತೀಚಿನ 3 ಫೋಟೋಗಳು.

6. ಅರ್ಜಿದಾರರು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆ ಹೊಂದಿರಬೇಕು. ಪುರಾವೆಗಾಗಿ ಚಾಲ್ತಿಯಲ್ಲಿರುವ ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ.

7. ಸಾಲದ ಭದ್ರತೆಗೆ ಸಾಲದ ಮೊತ್ತದಷ್ಟು ಮೌಲ್ಯವಿರುವ ಅರ್ಜಿದಾರರು/ಜಾಮೀನುದಾರರ ಸ್ಥಿರಾಸ್ತಿಯನ್ನು ನಿಗಮದ ಹೆಸರಿಗೆ ಆಧಾರ ಮಾಡಿಕೊಡವ ಬಗ್ಗೆ ಒಪ್ಪಿಗೆ ಪತ್ರ. **(ಸರಳ ನೋಂದಾಯಿತ ಅಡಮಾನ ಪತ್ರದ ಮೂಲಕ) (Simple Registered Mortgage Deed)**.

8. ಸಾಲದ ಭದ್ರತೆಗೆ ಅರ್ಜಿದಾರರು/ಜಾಮೀನುದಾರರ ನೀಡುವ ಸ್ಥಿರಾಸ್ತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಮೂಲ ದಾಖಲಾತಿಗಳನ್ನು ಒದಗಿಸಬೇಕು.

- ಸಾಲದ ಭದ್ರತೆಗೆ ನೀಡುವ ಸ್ಥಿರಾಸ್ತಿಯ ಮೂಲ ಪತ್ರ
- ಮ್ಯೂಟೇಷನ್ ರಿಜಿಸ್ಟರ್ ಎಕ್ಸ್‌ಟ್ರಾಕ್ಟ
- ಪಿತ್ರಾರ್ಜಿತ ಆಸ್ತಿಯಾಗಿದ್ದಲ್ಲಿ: (1) ಪಿತ್ರಾರ್ಜಿತ ಆಸ್ತಿಯಾಗಿರುವ ಬಗ್ಗೆ ಕಂದಾಯ ನಿರೀಕ್ಷಕರಿಂದ ದೃಢೀಕರಣ (2) ಆಸ್ತಿ ವಿಭಾಗ ಪತ್ರ.
- ಜಮೀನು ಆಗಿದ್ದಲ್ಲಿ ಚಾಲ್ತಿ ವರ್ಷದ ಪಹಣಿ ಪತ್ರ ಮತ್ತು ಲಾವಣಿ ಪತ್ರ
- ಚಾಲ್ತಿ ವರ್ಷದವರೆಗೆ ಕಂದಾಯ ಪಾವತಿಸಿದ ರಶೀದಿ
- ಖಾತಾ ಎಕ್ಸ್‌ಟ್ರಾಕ್ಟ್ ಮತ್ತು ಪಟ್ಟಾಪುಸ್ತಕ.
- ಸ್ಥಿರಾಸ್ತಿಯ ಚೆಕ್ಕು ಬಂದಿ.
- ಇ.ಸಿ. (13 ವರ್ಷಗಳದ್ದು) ನಮೂನೆ-15ರಲ್ಲಿ
- ಉಪನೋಂದಣಾಧಿಕಾರಿಗಳಿಂದ ಪಡೆದ ಸ್ಥಿರಾಸ್ತಿಯ ಮೌಲ್ಯ ನಿರ್ಣಯ ವರದಿ.

9. ಜಾಮೀನುದಾರರ ಒಪ್ಪಿಗೆ ಪತ್ರ (ನೋಟರಿ ಮಾಡಿಸಿರಬೇಕು).

10. ಅರ್ಜಿದಾರರ ವಂಶವೃಕ್ಷ. (ವಂಶವೃಕ್ಷದಲ್ಲಿ ತೋರಿಸಿರುವ ಕಾನೂನು ಬದ್ಧ ಹಕ್ಕುದಾರರಿಂದ ಆಸ್ತಿಯನ್ನು ನಿಗಮಕ್ಕೆ ಆಧಾರ ಮಾಡುವ ಬಗ್ಗೆ ಒಪ್ಪಿಗೆ ಪತ್ರ (ನೋಟರಿ ಮಾಡಿಸಿರಬೇಕು)

- ಅರ್ಜಿದಾರರ ಹಾಗೂ ಜಾಮೀನುದಾರರ ಆಸ್ತಿ ಮತ್ತು ಋಣಭಾರಗಳ ಘೋಷಣಾ ಪತ್ರ (ನಿಗದಿತ ನಮೂನೆಯಲ್ಲಿ)..

7. <u>ಸಾಲ ಮಂಜೂರಾತಿಯ ವಿಧಾನ:-</u>

....3

a) ನಿಗಮದ ಕೇಂದ್ರ ಕಚೇರಿಯಿಂದ ಅರ್ಜಿಗಳನ್ನು ಆಹ್ವಾನಿಸಿ ಜಾಹಿರಾತು ನೀಡುವುದು. ಜಿಲ್ಲಾ ವ್ಯವಸ್ಥಾಪಕರು ಸ್ವೀಕರಿಸಿದ ಅರ್ಜಿಗಳನ್ನು ಅನುಕ್ರಮವಾಗಿ ಸ್ವೀಕೃತಿ ರಿಜಿಸ್ಟರ್‌ನಲ್ಲಿ ದಾಖಲಿಸಬೇಕು.

b) ಅರ್ಹ ಅರ್ಜಿಗಳ ಪಟ್ಟಿ ಮಾಡಿ ಆಯ್ಕೆ ಸಮಿತಿಗೆ ಮಂಡಿಸುವುದು.

c) ಆಯ್ಕೆ ಸಮಿತಿಯು ಪಟ್ಟಿಯಲ್ಲಿರುವ ಅರ್ಜಿದಾರರು ಕೈಗೊಳ್ಳುವ ಉದ್ದೇಶದ ಲಾಭದಾಯಕತೆ ಮತ್ತು ಸಮಂಜಸತೆ, ಅನುಭವ, ಮರುಪಾವತಿ ಇಚ್ಛಾಶಕ್ತಿ, ಸಾಲದ ಭದ್ರತೆಗೆ ಒದಗಿಸಿರುವ ದಾಖಲೆಗಳನ್ನು ಮುಂತಾದ ಮಾಹಿತಿಗಳನ್ನು ಆಧರಿಸಿ ಅರ್ಹ ಫಲಾನುಭವಿಗಳನ್ನು ನಿಗದಿಪಡಿಸಿದ ಗುರಿಗೆ ಅನುಗುಣವಾಗಿ ಆಯ್ಕೆ ಮಾಡುವುದು.

d) ಆಯ್ಕೆ ಸಮಿತಿಯಿಂದ ಆಯ್ಕೆಯಾದ ಫಲಾನುಭವಿಗಳಿಂದ ಕುರಿ/ಮೇಕೆ ಸಾಕಾಣಿಕೆಗೆ ಸಾಲದ ಮೊತ್ತವು ರೂ.90000/-ಗಳು ಇರುವುದರಿಂದ ಸಾಲದ ಭದ್ರತೆಗೆ ಅರ್ಜಿದಾರರು/ಜಾಮೀನುದಾರರಿಂದ ಪಡೆದ ಸ್ಥಿರಾಸ್ತಿಯ ದಾಖಲೆಗಳನ್ನು ಹಾಗೂ ಅರ್ಜಿಯನ್ನು ಮತ್ತು ಸಂಬಂಧಸಿದ ದಾಖಲೆಗಳನ್ನು ಪ್ರಸ್ತಾವನೆಯೊಂದಿಗೆ ಸಂಬಂಧಿಸಿದ ವಿಭಾಗೀಯ ಕಛೇರಿಯ ಸಹಾಯಕ ಪ್ರಧಾನ ವ್ಯವಸ್ಥಾಪಕರಿಗೆ ಕಳುಹಿಸುವುದು.

e) ಸಹಾಯಕ ಪ್ರಧಾನ ವ್ಯವಸ್ಥಾಪಕರು, ಸ್ಥಿರಾಸ್ತಿಯ ದಾಖಲೆಗಳನ್ನು ವಿಭಾಗೀಯ ಕಛೇರಿಯಲ್ಲಿ **Em-Panel** ನಲ್ಲಿರುವ ವಕೀಲರ ಮೂಲಕ ದಾಖಲೆಗಳನ್ನು ಪರಿಶೀಲಿಸಿ ಸಾಲದ ಭದ್ರತೆಗೆ ಸೂಕ್ತವಾಗಿರುವ ಬಗ್ಗೆ ಅಭಿಪ್ರಾಯ ಪಡೆಯಬೇಕು. ಕಾನೂನು ಸಲಹೆಗಾರರು ನೀಡಿದ ಅಭಿಪ್ರಾಯವನ್ನು ಆಧರಿಸಿ ಸಾಲ ಮಂಜೂರಾತಿಗೆ ಆಡಳಿತಾತ್ಮಕ ಮಂಜೂರಾತಿ ಆದೇಶ ನೀಡುವುದು.

f) ವಿಭಾಗೀಯ ಕಛೇರಿಯಿಂದ ಆಡಳಿತಾತ್ಮಕ ಮಂಜೂರಾತಿ ಆದೇಶ ದೊರೆತ ನಂತರ ಫಲಾನುಭವಿ/ಜಾಮೀನುದಾರರು ಒದಗಿಸಿರುವ ಸ್ಥಿರಾಸ್ತಿಯನ್ನು ನಿಗಮದ ಹೆಸರಿಗೆ ಸಾಲ ಮರುಪಾವತಿಯಾಗುವವರೆಗೂ **ಸರಳ ನೋಂದಾಯಿತ ಅಡಮಾನ (Simple Registered Mortgage Deed)** ಮಾಡಿಸುವುದು. ನಿಗಮದ ಹೆಸರು ದಾಖಲಾಗಿರುವ ಬಗ್ಗೆ ಇ.ಸಿ.ಯನ್ನು ಪಡೆಯಬೇಕು. ಹೀಗೆ ರಿಜಿಸ್ಟರ್ಡ್ ಮಾಡಿದ ಮೂಲ ಪತ್ರ ಹಾಗೂ ಇ.ಸಿ.ಯನ್ನು ನಿಗಮದ ವಿಭಾಗೀಯ ಕಛೇರಿಗೆ ಕಳುಹಿಸುವುದು. ವಿಭಾಗೀಯ ಕಛೇರಿಯಲ್ಲಿ ಈ ದಾಖಲೆಗಳನ್ನು ಪರಿಶೀಲಿಸಿ ಆಯ್ಕೆ ಸಮಿತಿ ಮಂಜೂರು ಮಾಡಿರುವಂತೆ ಸಾಲ/ಸಹಾಯಧನ ಬಿಡುಗಡೆ ಮಾಡಿ ಫಲಾನುಭವಿ ಹೆಸರು ಮತ್ತು ಅವರು ಹೊಂದಿರುವ ಬ್ಯಾಂಕ್ ಶಾಖೆಯ ಹೆಸರು ಮತ್ತು ಖಾತಾ ಸಂಖ್ಯೆಯನ್ನು ನಮೂದಿಸಿದ ಕ್ರಾಸ್ಡ್ ಚೆಕ್ ರಚಿಸಿ ಜಿಲ್ಲಾ ವ್ಯವಸ್ಥಾಪಕರಿಗೆ ಸಾಲ ಬಿಡುಗಡೆ ಆದೇಶದೊಂದಿಗೆ ಕಳುಹಿಸುವುದು.

g) ಜಿಲ್ಲಾ ವ್ಯವಸ್ಥಾಪಕರು ಸಾಲ ಬಿಡುಗಡೆಯಾದ ಫಲಾನುಭವಿಗಳಿಂದ/ಜಾಮೀನುದಾರರಿಂದ ನಿಗದಿತ ನಮೂನೆಯಲ್ಲಿ ಭದ್ರತಾ ದಾಖಲೆಗಳಿಗೆ ಸಹಿಮಾಡಿಸಿಕೊಂಡು, ದಾಖಲಾತಿಗಳನ್ನು ಸಂರಕ್ಷಿಸಿಡಬೇಕು.

h) ಫಲಾನುಭವಿಗೆ ಕುರಿಗಳನ್ನು ಖರೀದಿಸಲು ಈ ಕೆಳಕಂಡ ಸದಸ್ಯರ ಖರೀದಿ ಸಮಿತಿ ರಚಿಸಿದೆ.

1. ನಿಗಮದ ಜಿಲ್ಲಾ ವ್ಯವಸ್ಥಾಪಕರು.
2. ಗ್ರಾಮಕ್ಕೆ ಸಂಬಂಧಿಸಿದ ಪಶು ವೈದ್ಯರು.
3. ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿ.
4. ಫಲಾನುಭವಿ.

....4

i) ಪಶುವೈದ್ಯಾಧಿಕಾರಿಗಳಿಂದ ಫಲಾನುಭವಿ ಖರೀದಿಸಿದ ಕುರಿ/ಮೇಕೆಗಳ ಆರೋಗ್ಯ ಮತ್ತು ವಯಸ್ಸು ಇತ್ಯಾದಿಗಳನ್ನು ತಪಾಸಣೆ ಮಾಡಿ ದೃಡೀಕರಿಸಿಕೊಳ್ಳಬೇಕು.

j) ಸಾಲದ ಮೊತ್ತವು ಖರೀದಿಸುವ ಕುರಿ/ಮೇಕೆಗಳ ಬೆಲೆಗಿಂತ ಕಡಿಮೆಯಿದ್ದಲ್ಲಿ ಹೆಚ್ಚುವರಿ ಮೊತ್ತವನ್ನು ಫಲಾನುಭವಿಯೇ ಭರಿಸತಕ್ಕದ್ದು.

k) ನಿಗಮದಿಂದ ಮಂಜೂರು ಮಾಡಿದ ಸಾಲದ ಮೊತ್ತವು ಕುರಿ/ಮೇಕೆಯ ಬೆಲೆಗಿಂತ ಹೆಚ್ಚುವರಿಯಿದ್ದಲ್ಲಿ, ಹೆಚ್ಚುವರಿ ಮೊತ್ತವನ್ನು ಕುರಿ ಸಾಕಾಣಿಕೆಗೆ ಸಂಬಂಧಿಸಿದಂತೆ ಇತರೆ ಅವಶ್ಯಕತೆಗಳಿಗೆ ಫಲಾನುಭವಿಯು ಬಳಸಿಕೊಳ್ಳುವುದು. (ಕುರಿ/ಮೇಕೆ ದೊಡ್ಡಿ ನಿರ್ಮಾಣ, ಮೇವು ಸಾಗಾಣಿಕೆ, ಔಷಧಿ, ವಿಮೆ ಪ್ರೀಮಿಯಂ ಪಾವತಿಗೆ)

l) <u>ವಿಮೆ:</u> ಖರೀದಿಸಿದ ಕುರಿ/ಮೇಕೆಗಳನ್ನು ಮೂರು ವರ್ಷ ಅವಧಿ(ಸಾಲ ಮರುಪಾವತಿ ಅವಧಿಯ ವರೆಗೆ) ವ್ಯಾಪಕ ವಿಮೆಗೆ ಒಳಪಡಿಸುವುದು. ಇದಕ್ಕೆ ತಗಲುವ ಪ್ರೀಮಿಯಮ್ ಮೊತ್ತವನ್ನು ಫಲಾನುಭವಿ ಭರಿಸಬೇಕು. ವಿಮೆ ಮಾಡಿಸಿರುವ ಬಗ್ಗೆ ಫಲಾನುಭವಿಗಳಿಂದ ಪ್ರೀಮಿಯಂ ಪಾವತಿ ದಾಖಲೆಗಳನ್ನು, ಕುರಿಗಳಿಗೆ ಓಲೆ ಹಾಕಿರುವ ಬಗ್ಗೆ ಅವುಗಳ ಸಂಖ್ಯೆಯ ದೃಢೀಕೃತ ದಾಖಲೆ ಸಂಗ್ರಹಿಸಿ, ಭದ್ರತಾ ದಾಖಲಾತಿಗಳೊಂದಿಗೆ ಜಿಲ್ಲಾ ವ್ಯವಸ್ಥಾಪಕರು ರಕ್ಷಿಸಿಡಬೇಕು.

m) ಕುರಿ/ಮೇಕೆಗಳು ಅಕಾಲಿಕ ಮರಣ ಹೊಂದಿದಲ್ಲಿ, ಸಂಬಂಧಪಟ್ಟ ಪಶುವೈದ್ಯಾಧಿಕಾರಿಯಿಂದ ದೃಡೀಕರಣ ಪತ್ರ ಪಡೆದು, ಜಿಲ್ಲಾ ವ್ಯವಸ್ಥಾಪಕರ ಮೂಲಕ ವಿಮಾ ಕಂಪನಿಗೆ ಕಳುಹಿಸುವುದು. ವಿಮಾ ಕಂಪನಿಯಿಂದ ಬಂದಂತಹ ಹಣವನ್ನು ಸಂಬಂಧಿಸಿದ ಫಲಾನುಭವಿಯ ಮರುಪಾವತಿ ಮೊತ್ತಕ್ಕೆ ಜಮಾ ಮಾಡಿಕೊಂಡು ಉಳಿಕೆ ಮೊತ್ತವನ್ನು ಫಲಾನುಭವಿಗೆ ಪಾವತಿಸಬೇಕು.

n) ಸಾಲ/ಸಹಾಯಧನವನ್ನು ಫಲಾನುಭವಿಗಳು ಸದುಪಯೋಗ ಪಡಿಸಿಕೊಂಡಿರುವ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು ಖಾತ್ರಿಪಡಿಸಿಕೊಳ್ಳುವುದು.

8. **<u>ಸಾಲ ಉಪಯೋಗದ ಬಗ್ಗೆ ಘಟಕ ತಪಾಸಣಾ ವರದಿ:-</u>** ನಿಗಮದ ಜಿಲ್ಲಾ ವ್ಯವಸ್ಥಾಪಕರು, ಫಲಾನುಭವಿ ಪಡೆದ ಸಾಲವನ್ನು ಸದುಪಯೋಗ ಪಡಿಸಿಕೊಂಡಿರುವ ಬಗ್ಗೆ ಅಗಿದಾಂಗೆ ಪರಿಶೀಲನೆ ಮಾಡುವುದು.

9. **<u>ಸಾಲಕ್ಕೆ ಪಡೆಯಬೇಕಾದ ದಸ್ತಾವೇಜುಗಳು:-</u>** ದಿನಾಂಕ 07-03-2003ರ ನಿಗಮದ ಸುತ್ತೋಲೆ ಸಂಖ್ಯೆ ಕಹಿನಿ/ವ್ಯ/ಸಿಆರ್-100/2002-03ರನ್ವಯ ನಿಗದಿತ ಮೊತ್ತಕ್ಕೆ ನಿಗಮದಿಂದ ದಸ್ತಾವೇಜುಗಳನ್ನು ಪಡೆಯುವುದು.

- ಪ್ರಾಮಿಸರಿ ನೋಟ್
- ಡಿ.ಪಿ.ನೋಟ್ ಡೆಲಿವರಿ ಲೆಟರ್
- ಲೆಟರ್ ಆಫ್ ರೀಪೆಮೆಂಟ್
- ಹೈಪಾಥಿಕೇಷನ್ ಡೀಡ್
- ಆರ್ಟಿಕಲ್ಸ್ ಆಫ್ ಅಗ್ರಿಮೆಂಟ್

} ಫಲಾನುಭವಿಯಿಂದ

- ಲೆಟರ್ ಆಫ್ ಗ್ಯಾರಂಟಿ -ಜಾಮೀನುದಾರರಿಂದ
- ಸಾಲದ ಮರುಪಾವತಿ ಅವಧಿ ಪೂರ್ಣಗೊಳ್ಳುವ ಮೊದಲು ಫಲಾನುಭವಿ ಹಾಗೂ ಜಾಮೀನುದಾರರಿಂದ ಋಣದ ಒಪ್ಪಿಗೆ ಪತ್ರ (Acknowledgement of Debt) ಪಡೆಯುವುದು.

10. **ಸಾಲ/ಸಹಾಯಧನ ಖಾತಾ ಪುಸ್ತಕ ನಿರ್ವಹಣೆ:-** ಆಯ್ಕೆ ಸಮಿತಿಯಿಂದ ಆಯ್ಕೆಯಾದ ಫಲಾನುಭವಿಗಳಿಗೆ ಬಿಡುಗಡೆಯಾದ ಸಹಾಯಧನ ಮತ್ತು ಸಾಲದ ವಿವರಗಳನ್ನು ಫಲಾನುಭವಿಗಳ ಹಾಗೂ ಜಾಮೀನುದಾರರ ಪೂರ್ಣ ವಿವರಗಳನ್ನು ಮಂಜೂರಾತಿ ಆದೇಶ ಪತ್ರದಲ್ಲಿ ತಿಳಿಸಿರುವಂತೆ ನಿರ್ವಹಿಸುವುದು.

11. **ಮರುಪಾವತಿ ಅವಧಿ:-**

ಈ ಯೋಜನೆಯಲ್ಲಿ ಪಡೆದ ಸಾಲವನ್ನು ಫಲಾನುಭವಿಯು ವಾರ್ಷಿಕ ಶೇ.4ರ ಬಡ್ಡಿ ದರದಲ್ಲಿ 3 ವರ್ಷಗಳ ಅವಧಿಯಲ್ಲಿ ಮರುಪಾವತಿಸಬೇಕು. ಕುರಿಗಳನ್ನು ಖರೀದಿಸಿದ ದಿನಾಂಕದಿಂದ 06 ತಿಂಗಳ ನಂತರ ಮೊದಲನೇ ಕಂತು ಹಾಗೂ ನಂತರದ ಅವಧಿಯಲ್ಲಿ ಪ್ರತಿ 3 ತಿಂಗಳಿಗೊಮ್ಮೆ ಹೀಗೆ ಒಟ್ಟು 12 ಕಂತುಗಳಲ್ಲಿ ಪೂರ್ಣ ಸಾಲವನ್ನು ಮರುಪಾವತಿ ಮಾಡಬೇಕು..

12. **ಡಿ.ಸಿ.ಬಿ ತಯಾರಿಸಿ ಸಾಲ ವಸೂಲಾತಿಗೆ ಕ್ರಮ:-**

(a) ಸಾಲ ಮಂಜೂರಾತಿ ಆದೇಶದಲ್ಲಿ ನಿಗದಿಪಡಿಸಿದ ಕಂತುಗಳನ್ವಯ ಅಸಲು ಮತ್ತು ಬಡ್ಡಿಯನ್ನು ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಮರುಪಾವತಿಸಬೇಕು. ವಿಳಂಭದ ಅವಧಿಗೆ ಶೇ.2ರಷ್ಟು ಸುಸ್ತಿ ಬಡ್ಡಿಯನ್ನು ವಿಧಿಸಲಾಗುವುದು.

(b) ಸಾಲ ಮರುಪಾವತಿಸದೆ ಸುಸ್ತಿಯಾದ ಫಲಾನುಭವಿಗಳಿಗೆ ನಿಯಮಾನುಸಾರ ಕಾನೂನು ಕ್ರಮ ಜರುಗಿಸಿ ಸಾಲ ವಸೂಲಾತಿಗೆ ಅಗತ್ಯ ಕ್ರಮವಹಿಸುವುದು.

13. **ಸಂಯೋಜನೆ:** ಈ ಯೋಜನೆಯ ಅನುಷ್ಠಾನವನ್ನು ಪಶು ಸಂಗೋಪನೆ ಇಲಾಖೆಯೊಂದಿಗೆ ಸಮನ್ವಯಗೊಳಿಸಿಕೊಂಡು ಅನುಷ್ಠಾನಗೊಳಿಸುವುದು.

14. **ಉದ್ಯಮ ಶೀಲತಾ ತರಬೇತಿ:** ಈ ಕಾರ್ಯಕ್ರಮದಲ್ಲಿ ಸೌಲಭ್ಯ ಮಂಜೂರು ಮಾಡಿದ ಫಲಾನುಭವಿಗಳಿಗೆ ಕುರಿ ಸಾಕಾಣಿಕೆ, ಪಶುವೈದ್ಯಕೀಯ ಬಗ್ಗೆ, ಸಾಲ ಮರುಪಾವತಿ, ವಿಮೆ ಕುರಿತು ಅರಿವು ಮೂಡಿಸಲು ಉದ್ಯಮ ಶೀಲತಾ ತರಬೇತಿ ಒದಗಿಸಲಾಗುವುದು.

15. **ನಿಯಮಗಳಿಗೆ ತಿದ್ದುಪಡಿ:-** ಈ ಯೋಜನೆ ಅನುಷ್ಠಾನಕ್ಕೆ ಕಾಲಕಾಲಕ್ಕೆ ಅವಶ್ಯವಿರುವ ತಿದ್ದುಪಡಿ/ಮಾರ್ಪಾಡು ಅಥವಾ ಸೇರ್ಪಡೆ ಇತ್ಯಾದಿಗಳನ್ನು ಮಾಡಲು ನಿರ್ದೇಶಕ ಮಂಡಳಿಯು ಅಧಿಕಾರ ಹೊಂದಿರುತ್ತದೆ. ಹಾಲಿ ನಿಯಮಗಳಡಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಉದ್ಭವವಾಗುವ ಶಂಕೆ/ಸಂಶಯಗಳನ್ನು ನಿವಾರಿಸಲು ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸ್ಪಷ್ಟೀಕರಣ ನೀಡಲು ಅಧಿಕಾರ ಹೊಂದಿರುತ್ತಾರೆ.

ಆರ್. ಭಾಸ್ಕರ್

(ಆರ್. ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

....6